Impact Factor (SJIF): 6.126 E-ISSN: 2583-1615, P-ISSN: 3049-3498

International Journal of Research in Academic World

Received: 15/April/2025 **IJRAW:** 2025; 4(5):274-277 **Accepted:** 25/May/2025

ಕನ್ನಡ ಕಥನಗಳಲ್ಲಿ 'ಧಾರ್ಮಿಕ ಆಚರಣಾ ಲೋಕ'ದ ಅವನತಿಯ ಬಿಂಬಗಳು

[*1]ಡಾ. ಜಯಶಂಕರ ಎಂ

[*1]ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಂಜನಗೂಡು, ಮೈಸೂರು, ಕರ್ನಾಟಕ, ಭಾರತ.

ಸಾರಾಂಶ

ಕನ್ನಡ ಕಥನಗಳಲ್ಲಿ 'ಧಾರ್ಮಿಕ ಆಚರಣಾ ಲೋಕ'ದ ಅವನತಿಯ ಬಿಂಬಗಳನ್ನು ವಿಶ್ಲೇಷಿಸುವುದು ಈ ಸಂಶೋಧನಾ ಲೇಖನದ ಮುಖ್ಯ ಉದ್ದೇಶವಾಗಿದೆ. ಭಾರತೀಯ ಜನಸಮುದಾಯಗಳಲ್ಲಿ ಧರ್ಮಾತೀತ ಮಾನವೀಯತೆ, ಪರಸ್ಪರ ಸಹಿಷ್ಣುತೆ, ಬಹುತ್ವದ ಸ್ವೀಕಾರ ಮತ್ತು ಸಹಬಾಳ್ವೆಯ ಮೌಲ್ಯಗಳು ಆಚರಣೆಗಳ ಮೂಲಕ ರೂಪುಗೊಂಡಿವೆ. ಸೂಫಿ ಪರಂಪರೆ, ತತ್ವಪದಕಾರರ ಚಿಂತನೆ ಹಾಗೂ ಜನಪದ ಧಾರ್ಮಿಕ ಆಚರಣೆಗಳು ವಿವಿಧ ಧರ್ಮಗಳ ಜನರನ್ನು ಸೌಹಾರ್ದದ ನೆಲೆಯಲ್ಲಿ ಬೆಸೆಯುತ್ತವೆ. ಆದರೆ ಆಧುನಿಕ ಕಾಲಘಟ್ಟದಲ್ಲಿ ಕೋಮುವಾದಿ ರಾಜಕಾರಣ, ಧಾರ್ಮಿಕ ಮೂಲಭೂತವಾದ, ಜಾಗತೀಕರಣ ಮತ್ತು ಮಾರುಕಟ್ಟೆ ಹಿತಾಸಕ್ತಿಗಳು ಈ ಮಾನವೀಯ ಸಂಬಂಧಗಳನ್ನು ದುರ್ಬಲಗೊಳಿಸುತ್ತಿವೆ. ಕುಂ. ವೀರಭದ್ರಪ್ಪನವರ 'ಕೆಂಡದ ಮಳೆ ಕರೆವಲ್ಲಿ ಉದಕವಾಗಿದ್ದವರ ಕಥೆ', ಅಮರೇಶ ನುಗಡೋಣಿಯವರ 'ಏ ದಿಲ್ ಮಾಂಗೇ ಮೋರ್' ಹಾಗೂ ಹನುಮಂತ ಹಾಲಿಗೇರಿಯವರ 'ಅಲೈ ದೇವ್ರು' ಕಥೆಗಳನ್ನು ಆಧರಿಸಿ, ಧಾರ್ಮಿಕ ಆಚರಣೆಗಳಲ್ಲಿನ ಸಾಮರಸ್ಯದ ಕುಸಿತ, ಮತೀಯ ವಿಭಜನೆ, ಸಾಮಾಜಿಕ ಬಹಿಷ್ಕಾರ ಮತ್ತು ಪ್ರತಿರೋಧದ ನೆಲೆಗಳನ್ನು ಲೇಖನವು ಪರಿಶೀಲಿಸುತ್ತದೆ. ಈ ಕಥನಗಳು ಧರ್ಮದ ಹೆಸರಿನಲ್ಲಿ ನಡೆಯುವ ಅಮಾನವೀಯತೆಯನ್ನು ಪ್ರಶ್ನಿಸುವುದರೊಂದಿಗೆ, ಸಹಬಾಳ್ವೆ ಮತ್ತು ಮಾನವೀಯ ಮೌಲ್ಯಗಳ ಪುನರ್ ಸ್ಥಾಪನೆಯ ಅಗತ್ಯವನ್ನು ಪ್ರತಿಪಾದಿಸುತ್ತವೆ.

ಮುಖ್ಯ ಪದಗಳು: ಧಾರ್ಮಿಕ ಆಚರಣಾ ಲೋಕ, ಧಾರ್ಮಿಕ ಬಹುತ್ವ, ಜನಪದ ಧರ್ಮ, ಸಹಬಾಳ್ವೆ, ಧಾರ್ಮಿಕ ಸಾಮರಸ್ಯ, ಕೋಮುವಾದ, ಧಾರ್ಮಿಕ ಮೂಲಭೂತವಾದ, ಮತೀಯ ವಿಭಜನೆ, ಸೂಫಿ ಪರಂಪರೆ, ಜನಪದ ಸಂಸ್ಕೃತಿ, ಮಾನವೀಯ ಮೌಲ್ಯಗಳು, ಜಾಗತೀಕರಣ, ಧರ್ಮ ಮತ್ತು ರಾಜಕಾರಣ, ಸಾಮಾಜಿಕ ಬಹಿಷ್ಕಾರ, ಸಾಂಸ್ಕೃತಿಕ ಪ್ರತಿರೋಧ.

ಪರಿಚಯ

ಕನ್ನಡ ಕಥನಗಳಲ್ಲಿ 'ಧಾರ್ಮಿಕ ಆಚರಣಾ ಲೋಕ'ದ ಅವನತಿಯ ಬಿಂಬಗಳು

ಜನಸಮುದಾಯಗಳು ತಮ್ಮ 'ಧಾರ್ಮಿಕ ಲೋಕ'ವನ್ನು ಕಲುಷಿತಗೊಳಿಸದೆ ಎಲ್ಲರನ್ನು ಒಳಗೊಳ್ಳುವ, ಬಾಳುವ, ಬಾಳಿಸಿಕೊಳ್ಳುವ ಮೌಲ್ಯಗಳನ್ನು ಆಳದ ಚೇತನವಾಗಿ ಸದಾ ಅಂತರಗಂಗೆಯ ರೀತಿಯಲ್ಲಿ ಕಾಪಾಡಿಕೊಂಡು ಬರುತ್ತಿವೆ. ಸಮಾನತೆಯ ಬಗೆಗೆ ತಾತ್ವಿಕವಾಗಿ ಕಟ್ಟಿಕೊಂಡಿರುವ ಮೌಲ್ಯಗಳಿಗಿಂತಲೂ ಜನಸಮುದಾಯಗಳು ತಮ್ಮೊಳಗೇ ಆದಿಕಾಲದಿಂದ ರೂಪಿಸಿಕೊಂಡು ಬರುತ್ತಿರುವ ಸಾಮಾಜಿಕ ಮೌಲ್ಯಗಳು ಮಹತ್ವವಾದವು. ಕನ್ನಡದ ಕಥನಗಳು ಈ ಬಗೆಯ 'ಧಾರ್ಮಿಕ ಲೋಕ'ದ ಮಾನವೀಯ ನೆಲೆಗಳನ್ನು ಮತ್ತು ಅಲ್ಲಿ ಉಂಟಾಗುತ್ತಿರುವÀ ಬದಲಾವಣೆಗಳನ್ನು ದಾಖಲಿಸಿವೆ.

'ಧಾರ್ಮಿಕ ಲೋಕ'ವೆಂದರೆ ತನ್ನ ಧಾರ್ಮಿಕ ಮೌಲ್ಯಗಳನ್ನು ಆಚರಿಸುತ್ತಾ, ಇತರರ ಧಾರ್ಮಿಕ ಮೌಲ್ಯಗಳನ್ನು ಒಪ್ಪುತ್ತಾ ಪರಸ್ಪರ ಸಹನೆಯನ್ನು ಹೊಂದುವ ನೆಲೆ. ಧಾರ್ಮಿಕ ಜಗತ್ತಿನಲ್ಲಿ ಎಲ್ಲ ಮತ- ಧರ್ಮದವರೂ ಪರಸ್ಪರ ಕೊಡುಕೊಳೆಯಿಂದ, ವಿಶ್ವಾಸದಿಂದ ಬದುಕಿದ್ದಾರೆ. ಎಲ್ಲ ಜನಗಳೂ, ಎಲ್ಲ ಧರ್ಮದ ಮಾನವೀಯ ತತ್ವಗಳೂ ಮಿಳಿತವಾಗಿ ಸಾಮರಸ್ಯದ ಬದುಕಿಗೆ ನೆಲೆ ಒದಗಿಸಿವೆ. ಪರಸ್ಪರ ಬೆರೆತ ಇಂಥ ಜನಪದರೊಳಗೆ ವಿಶಿಷ್ಟವಾದ ಕಲೆ, ಸಾಹಿತ್ಯ, ತತ್ವಜ್ಞಾನ, ವಾಸ್ತುಶಿಲ್ಪ, ದೇವರ ರೂಪಗಳು, ಆಚರಣೆಗಳು ನಂಬಿಕೆಗಳು ಮೂಡಿವೆ.

ಬಹುಮುಖಿ ಸಮುದಾಯಗಳ ನಡುವೆ ಸಾಮರಸ್ಯದ ಚಹರೆಗಳನ್ನು ಹುಡುಕುವಾಗ ರಹಮತ್ ತರೀಕೆರೆಯವರು ಅಕ್ಷರ ಪರಂಪರೆ ಇರುವ ಸಾಂಸ್ಥಿಕ ಅಥವಾ ಕ್ಲಾಸಿಕಲ್ ಧರ್ಮ ಹಾಗೂ ಬರಹರೂಪಿಯಲ್ಲದ ಜನಪದ ಅಥವಾ ದುಡಿವ ವರ್ಗದ, ಶ್ರಮಸಂಸ್ಕೃತಿಯಿAದ ರೂಪುಗೊಂಡ ಧರ್ಮ ಎಂದು ವಿಭಾಗಿಸಿಕೊಳ್ಳುತ್ತಾರೆ. (ಮರದೊಳಗಣ ಕಿಚ್ಚು, ಪುಟ: 231) ಪರಸ್ಪರ ಕೊಡುಕೊಳೆ ಇರುವ ಇವರು ತನ್ನದನ್ನು ನಂಬುತ್ತಾ, ಪರರ ನಂಬಿಕೆಗಳನ್ನೂ ಆತುಕೊಳ್ಳುತ್ತಾ ಬಾಳಿ

***Corresponding Author:** ಡಾ. ಜಯಶಂಕರ ಎಂ

ಬಂದಿದ್ದಾರೆ. ಬಹು ನಂಬಿಕೆ ಆಚರಣೆಗಳಲ್ಲಿ ಹಂಚಿಹೋಗಿರುವ ಹಿಂದೂಗಳು ಎಲ್ಲ ಪಂಗಡ, ಧರ್ಮಗಳ ದೇವರಿಗೆ ಭಕ್ತಿ, ಪ್ರೀತಿಯನ್ನು ತೋರಿ, ಕರುಣೆಯನ್ನು ಬೇಡುತ್ತಾರೆ. ತಮ್ಮ ಮಕ್ಕಳಿಗೆ ಬಂದ ರೋಗಗಳಿಗಾಗಿ, ತಮ್ಮ ಬಾಳಿನಲ್ಲಿ ಆವರಿಸಿರುವ ಸಂಕಷ್ಟಗಳ ನಿವಾರಣೆಗಾಗಿ ಹನುಮಂತನಿಂದ ತಾಯತ ಪಡೆಯಲು ಹಾತೊರೆವವರು, ಮಸೀದಿಯ ಎದುರೂ ಸಾಲುಗಟ್ಟಿ ನಿಲ್ಲುವ ಚಿತ್ರ ನಮ್ಮ ಶ್ರಮಸಂಸ್ಕೃತಿಗಳಲ್ಲಿ ಇದೆ. ರಹಮತ್ ತರೀಕೆರೆ ಅವರು ಚಲನಶೀಲತೆ ಇರುವುದು ಈ ಬರಹರೂಪಿಯಲ್ಲದ ಪರಂಪರೆ ಕಾಯ್ದುಕೊಂಡ ಧರ್ಮದಲ್ಲೇ ಎನ್ನುತ್ತಾ, ಅನ್ಯದೈವಕ್ಕೆರಗುವುದು ಇಂಥ ಶ್ರಮ ಸಂಸ್ಕೃತಿಗಳಲ್ಲಿ ಮಾತ್ರ ಸಾಧ್ಯ ಎಂಬಂಥ ಗ್ರಹಿಕೆಗಳನ್ನು ಹೀಗೆ ನೀಡುತ್ತಾರೆ: ಜನಸಮುದಾಯಕ್ಕೆ ತಮ್ಮ ನಂಬಿಕೆಯ ದೈವವೊಂದಿದ್ದರೂ ಮತ್ತೊಂದರ ಬಗ್ಗೆ ಸೆಳೆತವಿದೆ. ಕರ್ನಾಟಕದ ಪಿಂಜಾರರಿಗೂ ಮತ್ತು ಜಮಾತೆ ಇಸ್ಲಾಂಗಳಿಗೂ ಇರುವ ವ್ಯತ್ಯಾಸವಿದು. ಕರ್ನಾಟಕದ ಪಿಂಜಾರರು ಮುಸ್ಲಿಮರಾದರೂ ಅವರ ಭಾಷೆ, ಉಡುಪು, ಪೂಜಿಸುವ ದೈವಗಳು ಮತಾಂತರವಾಗುವ ಮುಂಚಿನವು. 'ಶುದ್ಧ' ಧರ್ಮ ಕಾಣಬಯಸುವವರಿಗೆ ಇವು ಅಸಹನೆ ಹುಟ್ಟಿಸುತ್ತವೆ. ಕರ್ನಾಟಕದ ಅನೇಕ ಗ್ರಾಮದೇವತೆಗಳು ತಮ್ಮ ಪರಿಸರದ ಸೂಫಿ ಸಂತರನ್ನು ಅಣ್ಣ ತಮ್ಮ ಎಂದು ಕರೆದುಕೊಳ್ಳುತ್ತವೆ. 'ಅನ್ಯ' ದೈವಗಳನ್ನು ಅಣ್ಣ ತಮ್ಮ ತಂಗಿಯರ ಸಂಬಂಧದಲ್ಲಿ ಕಾಣುವ ಈ ನಿಲುವು ಆ ದೇವತೆಗಳದ್ದಲ್ಲ, ಜನರದ್ದು. ಜನರಿಗೆ ಧರ್ಮವು ಬಳಕೆಯಿಂದ ಆತ್ಮೀಯ. ಜನ ಸಮುದಾಯಕ್ಕೆ ದೈವವು ದಂಡಾಧಿಕಾರಿಯಲ್ಲ. ಬಂಧು ಸಂಬಂಧ ಬೆಳೆಸಲು ಇಲ್ಲಿ ಜಾತಿ ಧರ್ಮದ ಗೋಜಲುಗಳು ಕಡಿಮೆ. ಸೂಫಿಸಂತರ ಸಮಾಧಿಗಳಲ್ಲಿ ನಡೆಯುವ ಉರುಸುಗಳಿಗೆ ಈಗಲೂ 'ಗಂಧ' ಅಥವಾ 'ಪರುಸಬಟ್ಟಲು', 'ಹಿಂದೂ'ಗಳ ಮನೆಯಿಂದ ಬರುತ್ತಿದೆ. ಒಡೆಯರು, ಪೀರರು, ಸಂತರು, ದಾಸಪ್ಪ, ಜೋಗಪ್ಪಗಳು ಸಮುದಾಯ ಮತ್ತು ದೈವಗಳ ನಡುವೆ ಬರುತ್ತಾರಾದರೂ, ಅವರು ಪುರೋಹಿತಶಾಹಿಗಳಲ್ಲ. ಸಮುದಾಯದ ನಂಬಿಕೆಗಳು ಇಷ್ಟೊಂದು ಮಾನವೀಯವಾಗಿ ಉದಾರವಾಗಿರುವುದರಿಂದಲೇ, ಇಂಡಿಯಾದ ಮೊಹರಂ ಆಚರಣೆಗಳು 'ಹಿಂದೂ ಮುಸ್ಲಿಂ' ಸಮುದಾಯಗಳ ಆಡುಂಬೊಲಗಳಾಗಿವೆ. ಈಗಲೂ ಕನ್ನಡದಲ್ಲಿರುವ ಮೊಹರಂ ಹಾಡುಗಳಲ್ಲಿ ದುಡಿವ ವರ್ಗಗಳು, ಪರಿಶಿಷ್ಟ ಸಮುದಾಯಗಳು 'ಅನ್ಯ' ದೇಶದ, 'ಅನ್ಯ' ಮತದ ಚರಿತ್ರೆ-ಪುರಾಣಗಳಿಗೆ, ಅವುಗಳೊಳಗಿನ ಮನುಷ್ಯರ ದುಃಖಕ್ಕೆ ಆಳವಾಗಿ ಮಿಡಿದಿರುವುದು ಗೊತ್ತಾಗುತ್ತದೆ.....ಸಮುದಾಯಗಳು 'ಧಾರ್ಮಿಕ'ವಾಗಿವೆ, ಮತೀಯವಾಗಿಲ್ಲ. ಅವುಗಳ ಮನಸ್ಸಿನೊಳಗೆ ಮತ್ತೊಂದನ್ನು ಉದಾರವಾಗಿ ಸ್ವೀಕರಿಸುವ ಆರೋಗ್ಯಕರ ಮನಸ್ಸಿದೆ. ಬಹುಧರ್ಮ, ಬಹುಸಂಸ್ಕೃತಿಗಳಿರುವ ದೇಶದಲ್ಲಿ ಈ ಸ್ವೀಕರಣ ಮನೋಭಾವವು ಬಹುದೊಡ್ಡ ಮೌಲ್ಯವಾಗಿದೆ. (ಮರದೊಳಗಣ ಕಿಚ್ಚು, ಪುಟ: 231)

ಸೂಫಿ ಪರಂಪರೆ ಮತ್ತು ತತ್ವಪದಕಾರರ ಪರಂಪರೆಗಳು ಕಟ್ಟಿಕೊಟ್ಟಿರುವ ಸಹಬಾಳ್ವೆಯನ್ನು ಉತ್ತರ ಕರ್ನಾಟಕ, ಮಧ್ಯ ಕರ್ನಾಟಕ ಭಾಗದ ಜನಸಮುದಾಯ ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಬಂದಿವೆ. ಎಲ್ಲ ಧರ್ಮದ, ದೇವರ ಉರುಸ್, ಹಬ್ಬ, ಜಾತ್ರೆ, ನಂಬಿಕೆಗಳು, ಆಚರಣೆಗಳನ್ನು ಒಟ್ಟಿಗೆ ಅನುಸರಿಸುತ್ತ ಬಂದಿರುವ ಮಹತ್ವದ ಜೀವನವಿಧಾನವಿದು. ಅನ್ಯ ಮತದವರೊಡನೆ ಭಿನ್ನಾಭಿಪ್ರಾಯ, ಜಗಳ, ಮುನಿಸು ಇದ್ದರೂ ಆಚರಣೆಗಳ ಸಂದರ್ಭದಲ್ಲಿ ಸಹಿಷ್ಣುತೆಯಿಂದ ಜೊತೆಯಾಗಿ ನಡೆದಿರುವ ಜೀವನಮಾರ್ಗಗಳಿವು. ಇಂಥ ಆಚರಣಾ ಪ್ರಧಾನ, ಪರಸ್ಪರ ಕೊಡುಕೊಳ್ಳೆ ಮಾಡುವ ಲೋಕವನ್ನು ಕನ್ನಡ ಸಂಸ್ಕೃತಿ ಚಿಂತನೆ ವಿಸ್ತಾರವಾಗಿ ಕಟ್ಟಿಕೊಟ್ಟಿದೆ.

'ಕೆಂಡದ ಮಳೆ ಕರೆವಲ್ಲಿ ಉದಕವಾಗಿದ್ದವರ ಕಥೆ' ಎಂಬ ಕುಂ. ವೀರಭದ್ರಪ್ಪ ಅವರ ಕಥೆ ಯಲ್ಲಿ ಮುಸಲ್ಮಾನರ ಸೇಕಣ್ಣನ ಶವವನ್ನು ವೀರಶೈವರ ರುದ್ರಭೂಮಿಯಲ್ಲಿ ಸಂಸ್ಕಾರ ಮಾಡಿರುವ ಬಗೆಗೆ ಎದ್ದಿರುವ ಸಂಘರ್ಷವೊಂದನ್ನು ಈ ಕಥನ ಕಾಣಿಸುತ್ತದೆ. ಇದರಿಂದಾಗಿ ಊರಿನಲ್ಲಿ ಮಳೆ ಬೆಳೆ ನಡೆದಿಲ್ಲವೆಂದು ನಂಬಿರುವ ಆ ಊರು ಸೇಕಣ್ಣನ ಹೆಂಡತಿಯಾದ ಶಾಲಮ್ಮ, ಮಗ ಪೀರಣ್ಣ, ಬಾಷಾ, ಮಗಳಾದ ಬೇಗಮ್ಮರನ್ನು ಹಿಂಸಿಸಲು ಆರಂಭಿಸಿದೆ. ಶವ ಹೂತ ಕಾರಣಕ್ಕೆ ಮಾತ್ರವಲ್ಲದೆ ಮೊದಲಿನಿಂದಲೂ ಮುಸಲ್ಮಾನರ ಬಗೆಗೆ ಅಸಹನೆ ತೋರುತ್ತಿದ್ದ ಊರಿನ ಮನಸ್ಥಿತಿಯನ್ನು ಕಥೆಯ ವಿವರಗಳಲ್ಲಿ ನೋಡಬಹುದು. ಸೇಕಣ್ಣ ತಾನು ದುಡಿದು ಉಳಿಸಿದ ಹಣದಲ್ಲಿ ಹೊಲ ಕೊಂಡುಕೊಳ್ಳುವಾಗಲೂ ಊರಿನ ಗೌಡ ರೇವಣ್ಣ "ಲೇ ತುರುಕು ನೀನು ಅದೆಂಗೆ ಹೊಲ ಕೊಳ್ತೀಯೋ ನೋಡೇಬುಡ್ತೀನಿ" ಎಂದು ಸವಾಲು ಹಾಕಿರುತ್ತಾನೆ.

ನ್ಯಾಯ ಪಂಚಾಯಿತಿ ಮಾಡಿದ ಗೌಡನು ವೀರಶೈವರ ರುದ್ರಭೂಮಿಯಲ್ಲಿ ಹೆಣ ಹೂತಿರುವ ಕ್ರಮ ತಕ್ಕುದಲ್ಲವೆಂದು ತೀರ್ಮಾನಿಸಿ, ಊರ ಬಸವದೇವರ ಗುಡಿಗೆ ಐನೂರ ಒಂದು ರೂಪಾಯಿ ತಪ್ಪು ದಂಡ ಕೊಡಲು ಒತ್ತಾಯಿಸುತ್ತಾನೆ. ದಂಡ ಕೊಡದಿದ್ದರೆ ಊರಿನಿಂದ ಬಹಿಷ್ಕಾರ ಹಾಕುವುದಾಗಿ ಬೆದರಿಸುತ್ತಾರೆ. ಬಡವರಾದ ಶಾಲಮ್ಮ ನಿರಾಕರಿಸುತ್ತಾಳೆ. "ಕೈ ಮುಗುತೀನ್ರಿ ಕಾಲ್ಗೂ ಬೀಳ್ತೀನಿ.. ಏನೋ ಆಗೋದು ಆಗಿ ಹೋಗೇತಿ.. ಮುಸಲ್ಮಾನರ ಮನೆ ನಮ್ಮದೊಂದೇ ಈ ಊರಾಗಿರೋದು; ನಮಗಾರಿಗೂ ಮುಸಲ್ಮಾನಿ ಮಾತಾಡೀಕೆ ಬರೋದಿಲ್ಲ.. ನಾವು ಪರ್ಲ ಹಬ್ಬ ಮಾಡ್ತಿಲ್ಲ.. ರಂಜಾನೂ ಮಾಡ್ತಿಲ್ಲ ನಾವೂ ನಿಮ್ಮಂಗೆ ನಾಗಪಂಚಮಿ, ಉಗಾದಿ ಹಬ್ಬ ಮಾಡ್ತೀವಿ..ಬಸಂದೇವ್ರೇ ನಂ ಮನಿದೇವ್ರು.. ಇಂತದರಾಗೆ ನನ್ ಗಂಡನ ಹೆಣಾನ ನಿಮ್ ಸುಡುಗಾಡ್ನಾಗೆ ಉಗುದ್ರೆ ಅದ್ರಗೇನೈತಿ ತಪ್ಪು? ಊರಿಗೆ ಇರೋದೇ ಒಂದು ಸುಡುಗಾಡು.. ನನ್ ಹೆಣಾನೂ, ನನ್ ಮಕ್ಳ ಹೆಣಾನೂ ಅದ್ಯಾಗ ಇಟ್ರೆ ತಪ್ಪೇನೈತಿ?" (ಕೆಂಡದ ಮಳೆ ಕರೆವಲ್ಲಿ ಉದಕವಾಗಿದ್ದವರ ಕಥೆ, ಬರಿ ಕಥೆಯಲ್ಲೊ ಅಣ್ಣಾ, ಪುಟ: 135) ಎಂದು ಪರಿಪರಿಯಾಗಿ ಕೇಳಿಕೊಳ್ಳುತ್ತಾಳೆ. ಪಂಚಾಯತಿಯ ದೈವಸ್ಥರು ಬಗ್ಗುವುದೇ ಇಲ್ಲ. ಕೊನೆಗೆ ಮಗನಾದ ಹರೆಯದ ಬಾಷಾ ಏನಾದರೂ ಮಾಡ್ಕೊಳಿ ಎಂದು ಸವಾಲೆಸೆದು ಪಂಚಾಯಿತಿಯಿಂದ ಹೊರ ನಡೆಯುತ್ತಾನೆ.

ಮಾರನೆ ದಿನ ಗೌಡ, ಹೂತಿರುವ ಸೇಕಣ್ಣನ ಹೆಣವನ್ನು ಹೊರತೆಗೆಸಿ ಊರ ಅಗಸೆ ಬಾಗಿಲಲ್ಲಿ ಹಾಕಿಸುತ್ತಾನೆ. ಇದೊಂದು ತೀರ ಆಘಾತಕಾರಿಯೂ, ಅಮಾನವೀಯವೂ ಆದ ಆಚರಣಾ ಲೋಕದ ಬಿಕ್ಕಟ್ಟುಗಳನ್ನು ದಾಖಲಿಸುವ ಕಥನವಾಗಿದೆ. ಕಥನದ ಮುಂದಿನ ಭಾಗ ಅತಿ ವಾಸ್ತವವಾದಿ ಕಥನದ ನೆಲೆಯೊಡನೆ ಮುಂದುವರೆಯುತ್ತದೆ. ಭಾಷಾ ಕೊಳೆಯುತ್ತಿರುವ ತನ್ನ ತಂದೆಯ ಹೆಣವನ್ನು ನೋಡಲಾರದೆ ರೋಷಾವೇಶದಲ್ಲಿ ಹೊತ್ತೊಯ್ದು ಗೌಡರ ಮನೆಯ ದೇವರ ಕೋಣೆಯಲ್ಲಿದ್ದ ಕಬ್ಬಿಣದ ಪಿಟಾರಿಯ ಮೇಲಿಡುತ್ತಾನೆ. ಇದರಿಂದ ಬೆಚ್ಚಿದ ಗೌಡ ಅವನನ್ನು ಕಂಬಕ್ಕೆ ಕಟ್ಟಿಸಿ ಬಡಿದು, ಪೊಲೀಸರನ್ನು ಕರೆಸಿ ಒಪ್ಪಿಸುತ್ತಾನೆ. ಬರುವ ಪೊಲೀಸರು ದೇವರ ಕೋಣೆಗೆ ಹೋಗಲು ಅಂಜುವುದು, ಕೊನೆಗೆ ಹೋದಾಗ ಗೌಡರ ಚಿನ್ನದ ಸರ ಕದಿಯುವುದು, ಬಾಷಾ ಠಾಣೆಯಲ್ಲಿ ಬಂದಿಯಾಗುವುದು, ಮಗನನ್ನು ಬಿಡಿಸಿಕೊಳ್ಳಲು ಶಾಲಮ್ಮ, ಪೀರಣ್ಣ ಯತ್ನಿಸುವುದು- ಹೀಗೇ ಕಥೆ ಬೇರೊಂದು ದೆಸೆಯಲ್ಲಿ ಸಾಗುತ್ತದೆ.

ಧಾರ್ಮಿಕ ಲೋಕದ ಪರಸ್ಪರ ನಂಬಿಕೆಯ, ಆಚರಣೆಯ ನೆಲೆಗಳು ಮತೀಯ ನೋಟಗಳನ್ನು ಪಡೆಯುತ್ತಾ, ಸಾಮರಸ್ಯ ಸಂಬಂಧಗಳು ನಾಶದ ಕಡೆಗೆ ಸಾಗುತ್ತಿರುವ ಹಾದಿಯನ್ನು

ಅಮರೇಶ ನುಗಡೋಣಿ ಅವರ 'ಏ ದಿಲ್ ಮಾಂಗೇ ಮೋರ್' ಕಥೆಯಲ್ಲಿ ಕಾಣಬಹುದು. ಜಾಗತೀಕರಣ, ಮಾರುಕಟ್ಟೆ ರಾಜಕಾರಣ, ಆಧುನಿಕ ಕಾಲಘಟ್ಟದ ಅನುಭೋಗಿ ಬದುಕಿನ ಹಿತಾಸಕ್ತಿಗಳು ಗ್ರಾಮಜಗತ್ತಿನ ಸಹಜವಾದ ಮತೀಯ ಸಹನೆಯನ್ನು ಭಗ್ನಗೊಳಿಸುವ ಮುಖಗಳು ಇಲ್ಲಿ ಸ್ಪಷ್ಟವಾಗಿ ಗೋಚರಿಸುತ್ತವೆ. ಈ ಕಥೆಯಲ್ಲಿನ ಹುಸೇನಮ್ಮ ಸಣ್ಣದೊಂದು ಹೋಟೆಲ್ ನಡೆಸುತ್ತಾ ಜೀವಪರ ನಿಲುವಿನಲ್ಲಿ ಬದುಕುತ್ತಿರುವವಳು. ಅನಾಥನಾಗಿರುವ ಚಿದಾನಂದನನ್ನು ತನ್ನ ಮಗನೆಂದೇ ಒಪ್ಪಿರುವವಳು; ಗಂಡನಿಂದ ತಿರಸ್ಕಾರಕ್ಕೆ ಒಳಗಾಗಿ ಕವಿತಾಳದ ಸಂತೆಯಲ್ಲಿ ಅನಾಥವಾಗಿ ನಿಂತಿದ್ದ ಗರ್ಭಿಣಿ ಹೆಂಗಸು ಎಲ್ಲಮ್ಮನ್ನು ದವಾಖಾನೆಗೆ ಸೇರಿಸಿ, ಹೆರಿಗೆಯಲ್ಲಿ ಮಗು ನಿಧನವಾಗಿ, ಉಳಿದುಕೊಂಡ ಎಲ್ಲಮ್ಮನನ್ನು ತನ್ನ ಮಗಳೆಂದೇ ತಿಳಿದು ಸಾಕುತ್ತಿರುವವಳು. ತನಗೆ ಕಷ್ಟ ಬಂದಾಗಲೆಲ್ಲ ಖಾದರಲಿಂಗಕ್ಕೆ ಸಕ್ಕರೆಯನ್ನೂ, ಎಲ್ಲಮ್ಮದೇವಿಗೆ ಜೋಡುಗಾಯನ್ನು ಅರ್ಪಿಸಿದ ಭರವಸೆಯಲ್ಲಿ ಬದುಕುವವಳು. ಈ ಬಗೆಯ ಮತಾತೀತವಾದ ಸಾಂಸ್ಕೃತಿಕ ಜಗತ್ತನ್ನು, ಬದುಕಿನ ಸಹಜ ಮಾನವೀಯ ಲಯಗಳನ್ನು ಸಂಪೂರ್ಣವಾಗಿ ನಾಶಮಾಡುತ್ತಿರುವ ಮತೀಯವಾದ, ಮತೀಯವಾದದ ರಾಜಕೀಯ ಮುಖಗಳನ್ನು ಈ ಕಥೆ ಅಭಿವ್ಯಕ್ತಿಸುತ್ತದೆ. ಹುಸೇನಮ್ಮನ ಹೋಟೆಲ್ಲಿಗೆ ಬರುವ ಆ ಊರಿನ ರಾಜಕೀಯ ಮುಖಂಡರು ಧರ್ಮ ಮತ್ತು ರಾಜಕೀಯವನ್ನು ಸಮೀಕರಿಸಿ ನೋಡುವ, ಎರಡು ರಾಷ್ಟ್ರೀಯ ರಾಜಕೀಯ ಪಕ್ಷಗಳನ್ನು ಮತೀಯ ನೆಲೆಯಲ್ಲಿ ಬಿಂಬಿಸುವ ನೋಟಗಳನ್ನು ಈ ಕಥೆ ಅಭಿವ್ಯಕ್ತಿಸುತ್ತದೆ. ರಾಜಕೀಯ ಅಧಿಕಾರದ ಹಿತಾಸಕ್ತಿಯಿಂದ ಮನುಷ್ಯಲೋಕವನ್ನು ಮತೀಯ ಆಯಾಮದಲ್ಲಿ ವಿಭಜಿಸಿ ನೋಡುವ ಊರ ಮಂದಿಯನ್ನು ಕಂಡು ಹುಸೇನಮ್ಮ ತನ್ನ ಪ್ರತಿರೋಧವನ್ನು ಹೀಗೆ ವ್ಯಕ್ತಪಡಿಸುತ್ತಾಳೆ: "ರಾಜಕೀಯಕ್ಕೆ ಕೊಳ್ಳಿಯಿಡ! ಊರುಕೇರಿ ಮಂದಿ ಕಂಡಲ್ಲಿ ಕೂತಲ್ಲಿ ಒಂದೀಟು ಚಂದ ಮಾತಾಡದೇ ಕಾಣೆ! ಲಿಂಗಪ್ಪನದೊAದು, ಭೀಮಪ್ಪನದೊಂದು, ಫಕೀರಪ್ಪನದೊಂದು ಅಂತ ತಲಿಗೊಂದು ಪಾರ್ಟಿಮಾಡಿಕೊಂಡು ಬರೀ ಕಚ್ಚಾಡ್ತಾವ! ಊರು ಕೇರಿ ಮಂದಿ ಕೂಡಿ ಪಸಂದಾಗಿ ಮಾತಾಡುವ ಕಾಲವೇ ಸತ್ತು ಹೋಯ್ತು!". (ಏ ದಿಲ್ ಮಾಂಗೇ ಮೋರ್, ಸವಾರಿ, ಪುಟ: 43) ಜಾತ್ಯತೀತ ಮೌಲ್ಯಗಳನ್ನು ಪೊರೆಯುವ ಹುಸೇನಮ್ಮನ ಈ ಮಾತುಗಳು ಆಚರಣಾ ಲೋಕದ ಪಲ್ಲಟಗಳನ್ನು ಸಾರುತ್ತವೆ.

ಭಾರತ ಮತ್ತು ಪಾಕಿಸ್ತಾನ ದೇಶಗಳ ನಡುವೆ ನಡೆಯುವ ಕಾರ್ಗಿಲ್ ಯುದ್ಧಕ್ಕೆ ಒಡಮೂಡುವ ಕೋಮುವಾದಿ ಆಲೋಚನಾ ಕ್ರಮಗಳ ಆಯಾಮವನ್ನು ಈ ಕಥೆ ಕಾಣಿಸುತ್ತದೆ. ಈ ಯುದ್ಧದ ಸನ್ನಿವೇಶದಲ್ಲೇ ಈ ಎರಡೂ ದೇಶಗಳ ನಡುವೆ ನಡೆಯುವ ಕ್ರಿಕೇಟ್ ಆಟವನ್ನು ಕೇವಲ ಆಟವೆಂದು ಕಾಣಲಾಗದ ಮನಸ್ಥಿತಿ ನಿರ್ಮಾಣವಾಗಿದೆ. ಕಾರ್ಗಿಲ್ ಯುದ್ಧದಂತೆ ಕ್ರಿಕೇಟ್ ಕೂಡ ದೇಶದ ಮನಸ್ಸಿನ ಒಳಗೆ ನಡೆಯುತ್ತಿರುವ ಕದನದಂತೆ ಭಾಸವಾಗುತ್ತಿದೆ. ಕಾರ್ಗಿಲ್ ಯುದ್ಧ ಮತ್ತು ಕ್ರೀಡೆಯ ಕದನ ಎರಡರ ನಡುವೆ ಜಾಗತೀಕರಣದ, ವ್ಯಾಪಾರ ವಾಣಿಜ್ಯದ ಹಿತಾಸಕ್ತಿಗಳು ಅಡಗಿವೆ. ಕೋಮುಭಾವನೆಗಳನ್ನು ಮಾರುಕಟ್ಟೆಯ ಲಾಭಕ್ಕೆ ಬಳಸಿಕೊಳ್ಳುವ ಮನಸ್ಸುಗಳು ನಿರ್ಮಾಣವಾಗಿವೆ.

ಸ್ವಘೋಷಿತ ಧರ್ಮರಕ್ಷಕ, ದೇಶಪ್ರೇಮಿಗಳು ಧಾರ್ಮಿಕ ಭಾವನೆಗಳನ್ನು ವ್ಯಾಪಾರಕ್ಕಿಟ್ಟು ಲಾಭಗಳಿಸುವ ದ್ರೋಹದ ಮನಸ್ಥಿತಿಯನ್ನು ತೋರಿಸುವ ಈ ಕಥೆ ಮಾನವತೆಯ ಮನಸ್ಸುಗಳು ಲಾಭನಷ್ಟದ ಧರ್ಮದ ತಳಹದಿಯಲ್ಲಿ ನಿಲ್ಲುತ್ತಿರುವ ಬಗೆಯನ್ನು ತೋರಿಸುತ್ತದೆ. ಶಾಂತಿ ಮತ್ತು ಗೋವಿಂದನ ಪ್ರೇಮದ ವಿವಾದದ ಸಂದರ್ಭದಲ್ಲಿ ಹುಸೇನಮ್ಮ ಗೋವಿಂದನಿಗೆ ಬುದ್ಧಿ ಹೇಳುವುದು ಹೀಗೆ: "ಗೋವಿಂದ, ನೀನಾದ್ರೂ ಹೇಳಪ್ಪ! ದೊಡ್ಡ ಮಂದಿಯೆಲ್ಲ ಕೂಡಿ ಕೇರಿಮಂದಿಯನ್ನು ಸುಮ್ನೆ ಬಿಡ್ತಾರೇನು? ಈಗೀಗ ಮಠದ ಮಂದಿ, ಲಿಂಗವಂತ ಮಂದಿ ಸೈತ ಕುಂಕುಮ ಹಚ್ಚಿಕೊಳ್ಳುವ ಮಂದಿ ಜತೆ ಸೇರಿಬಿಟ್ಟಾರ. ಅವರೆಲ್ಲ ಕಾಲು ಕೆದರಿ ಜಗಳಕ್ಕು ನಿಂತು, ಬಡಿಗಿ ಬೀಸ್ತಾರ. ನಿನ್ನ ಮನೆ ಮಂದಿ ಕರಾರಯಾಗ ಚಂದ ಇರಬೇಕಂದ್ರ ನೀನು ಹಿಂದಕ್ಕ ಸರಿ." ಹುಸೇನಮ್ಮನ ಈ ಆತಂಕದ ಮಾತುಗಳಲ್ಲಿ ಹುಸಿ ಧರ್ಮ ರಕ್ಷಣೆಯ ಆಲೋಚನಾ ವಿಧಾನಗಳು, ಕ್ರಿಯಾ ಮಾದರಿಗಳು ಜನಸಮುದಾಯದ ನಿಜದ ನಂಬಿಕೆಯ ಲೋಕದಲ್ಲಿ ಉಂಟುಮಾಡುತ್ತಿರುವ ಪಲ್ಲಟಗಳನ್ನು ಕಾಣಬಹುದು.

ಹನುಮಂತ ಹಾಲಿಗೇರಿ ಅವರ 'ಅಲೈ ದೇವ್ರು' ಕಥೆ ಮತಾತೀತವಾಗಿ ಕೂಡಿಬಾಳುವ ಜೀವನ ವಿಧಾನದ ಬಹು ಮುಖ್ಯವಾದ ಭಾಗವೇ ಆಗಿದ್ದ ಹಿಂದೂ- ಮುಸಲ್ಮಾನರು ಒಟ್ಟಾಗಿ ಆಚರಿಸುವ ಅಲೈ ದೇವರ ಹಬ್ಬ, ಆ ಒಗ್ಗಟ್ಟಿನ ಹಬ್ಬಕ್ಕೆ ಈಗ ತಗುಲಿರುವ ರೋಗದ ಹಲವು ಮುಖಗಳನ್ನು ಕಾಣಿಸುತ್ತದೆ.

ಎಂದಿನಂತೆ ಸಂದಿಗೊಪ್ಪವೆಂಬ ಊರಿನಲ್ಲಿ ಅಲೈ ದೇವರ ಹಬ್ಬಕ್ಕೆ ಒಂದು ತಿಂಗಳ ಮುಂಚೆಯೇ ಮೋನಪ್ಪಜ್ಜನ ಮುಂದಾಳತ್ವದಲ್ಲಿ ರಿವಾಯತ್ ಪದಗಳ ಕಲಿಕೆ ಆರಂಭವಾಗಿದೆ. ಹಲಗೆಯ ಬಡಿತಕ್ಕೆ ತಕ್ಕಂತೆ ಹುಡುಗರು, ಯುವಕರು ಹೆಜ್ಜೆ ಹಾಕಿ ಕುಣಿಯುತ್ತ ಪೂರ್ವ ತಯಾರಿಯಲ್ಲಿ ತೊಡಗಿದ್ದಾರೆ. ಜಾತಿ, ಮತಗಳ ಗಡಿ ಇಲ್ಲದೆ ನಡೆಯುವ ಅಲೈ ದೇವರ ಹಬ್ಬಕ್ಕೆ ಎಲ್ಲರೂ ಸಿದ್ಧವಾಗುತ್ತಿದ್ದಾರೆ. ಇದರ ಮಧ್ಯೆ ದಿನವೂ ಬಾಗಲಕೋಟೆಗೆ ಹೋಗಿ ಬರುವ ವಕೀಲ ಗಣೇಶ್ ನಾಗರೆಡ್ಡಿ ಎಂಬುವವನ ಮುಂದಾಳತ್ವದಲ್ಲಿ ಆರೆಸ್ಸೆಸ್ ಬೈಠಕ್ಕಳೂ ನಡೆಯುತ್ತಿವೆ. ಅದರ ಭಾಗವಾಗಿ ಊರಿನಲ್ಲಿ ಕಹಿರಸ (ಕರ್ನಾಟಕ ಹಿಂದೂ ರಕ್ಷಣಾ ಸಂಸ್ಥಾ) ರಚನೆಯಾಗಿದೆ. ಕಹಿರಸದ ಹುಡುಗರು ಹಿಂದೂ ರಾಷ್ಟ್ರ ನಿರ್ಮಾಣ ಮಾಡಲು, ಇದಕ್ಕೆ ಮುಸಲ್ಮಾನರು ಅಡ್ಡಲಾಗಿದ್ದರೆ ಎಂದು ತಿಳಿದು, ಮುಸಲ್ಮಾನರನ್ನು ಕ್ರಮೇಣ ನಾಶ ಮಾಡಲು ಸಿದ್ಧವಾಗುತ್ತಿದ್ದಾರೆ. ಅಲ್ಲದೆ ಮೊದಲ ಯೋಜನೆಯಾಗಿ ತಮ್ಮ ಊರಿನಲ್ಲಿ ನಡೆಯುತ್ತಿರುವ, ಎಲ್ಲರೂ ಒಟ್ಟಾಗಿ ಕೂಡಿ ಆಚರಿಸುವ ಅಲೈ ದೇವರ ಉತ್ಸವವನ್ನು ತಡೆದು ನಿಲ್ಲಿಸಲು ತಯಾರಾಗುತ್ತಿದ್ದಾರೆ. ಕಾಲೇಜು ಕಲಿಯುವ ಹುಡುಗರಲ್ಲಿ ಧರ್ಮ, ದೇವರು, ಆಚರಣೆಗಳ ಬಗೆಗೆ ಪ್ರತ್ಯೇಕತೆಯನ್ನು ಮೂಡಿಸಲು ಮುಂದಾಗಿದ್ದಾರೆ. "ಮುಸಲರದ್ದು ಒಂದು ಪ್ರತ್ಯೇಕ ಧರ್ಮ ಎನ್ನುವುದು ಮುಸಲಾರಾದಿಯಾಗಿ ಆ ಊರಿನಲ್ಲಿ ಹಳಬರ್ಯಾರಿಗೂ ಗೊತ್ತೇ ಇರಲಿಲ್ಲ. ಇತ್ತೀಚೆಗೆ ಕಾಲೇಜಿಗೆ ಹೋಗಿ ಉನ್ನತ ಶಿಕ್ಷಣ ಕಲಿಯುತ್ತಿದ್ದ, ಮತ್ತು ಊರಿನಲ್ಲಿ ಕಹಿರಸ ಶಾಖೆಯ ಕಟ್ಟಾಳುಗಳಾಗಿದ್ದ ಕೆಲವರಿಗೆ ಮಾತ್ರ 'ನಾವು ಬೇರೆ ಮುಸಲರು ಬೇರೆ' ಎನ್ನುವುದು ಅಸ್ಪಷ್ಟವಾಗಿ ಬೇರೂರತೊಡಗಿತ್ತು." (ಗೆಂಡೆ ದೇವ್ರು, ಅಲೈ ದೇವ್ರು, ಪುಟ: 31) ಹೀಗೆ ಊರಿನಲ್ಲಿ ಮತೀಯ ಭಾವನೆಗಳು ಬಲಿಯತೊಡಗಿವೆ.

ಹಳೆಯ ತಲೆಮಾರಿನ ಸಹಬಾಳ್ವೆಯ ಅಂತರಗAಗೆ ಹೊಸ ತಲೆಮಾರಿನಲ್ಲಿ ದಿಕ್ಕು ಬದಲಿಸುತ್ತಿದೆ, ಬತ್ತಿ ಹೋಗುತ್ತಿದೆ. ಹಳೆಯ ತಲೆಗಳ ಲಯದೊಳಗೇ ಅಂತರಗಂಗೆಯನ್ನು ತಮ್ಮೆದೆಗಳಿಗೆ ಬಿಟ್ಟುಕೊಳ್ಳಲು ಯತ್ನಿಸುವ ಅಲೈ ಹಬ್ಬದಲ್ಲಿ ಹುಸನಪ್ಪನೊಡನೆ ಹಲಾಯಿ ಪಂಜುಗಳ ಜೊತೆ ಫಕೀರರಾಗಿ ಹೊರಡುವ ಹೊಸ ಹುಡುಗರನ್ನು ಕಹಿರಸದ ಸದಸ್ಯರು ಹೆದರಿಸುತ್ತಾರೆ. "ನಿಮ್ಮೌರ ಸಾಬರ ಹಬ್ಬದಾಗ ನೀವ್ಯಾಕ ಪಕೀರ ಆಗಿ ಭಿಕ್ಷೆ ಬೇಡ್ತಿರಲೇ ನಡೀರಿ ನಿಮ್ಮ ಮನೆಗೆ ಅಂತ ಕುಂಡಿಗೆ ಎರಡೇಟು ಕೊಟ್ಟರು". (ಗೆಂಡೆ ದೇವ್ರು, ಅಲೈ ದೇವ್ರು, ಪುಟ: 35) ಇಂಥ ಹೊಸ ವರ್ತನೆ ಊರಿನ ಹಿರಿಯರಲ್ಲಿ ಅಚ್ಚರಿಯನ್ನು ಉಂಟುಮಾಡುತ್ತದೆ.

ಊರಿನಲ್ಲಿ ಕೆಲವು ಸಹಜೀವಿಗಳಲ್ಲಿ ಮೂಡಿರುವ

ಅಪನಂಬಿಕೆಯನ್ನು ಅನಕ್ಷರಸ್ಥರಾದ ಅವರ ಮನೆಯವರು ಕೇಳುವ ಮುಗ್ಧ ಪ್ರಶ್ನೆಗಳು ಮಾರ್ಮಿಕವಾಗಿವೆ. ಉಪ್ಪಾರರ ಪಾರವ್ವ ಕಹಿರಸ ಗುಂಪಿನಲ್ಲಿ ಸೇರಿ ಕೋಮುವಾದಿಯಾಗಿರುವ ತನ್ನ ಮಗನನ್ನು ಪ್ರಶ್ನಿಸುವುದು ಕಥನದಲ್ಲಿ ಹೀಗೆ ದಾಖಲಾಗಿದೆ: "ಅಲ್ಯೋ ಮುಸಲರ ರಾಜಪ್ಪ, ಡೊಂಗ್ರೆಪ್ಪ, ಹುಸನಪ್ಪ, ಪಾತವ್ವ ನಮ್ಮ ಮನಿ ಮಗ್ಗಲದಾಗ ಅದಾರ. ಅವರ ಅಜ್ಜ ಮತ್ತಜ್ಜರೂ ಇಲ್ಲೇ ಇದ್ರು. ನಮ್ಮ ಹೊಲದಾಗ ಕೂಲಿನಾಲಿ ಮಾಡಿ ಹೊಟ್ಟೆ ತುಂಬಿಸಿಕೊತಾವು. ತಾವಾತು ತಮ್ಮ ಬಾಳೆ ಆತು ಅಂತ ಚಂದದಾವು. ಲಾಲಸಾಬ ಪಾತವ್ವ ಇರಲಿಲ್ಲಂದ್ರ ನಮ್ಮ ಹತ್ತು ಎಕ್ರೆ ಹೊಲ ತೂಗಸಾಕ ಬಾಳ ಕಷ್ಟ ಬೀಳಬೇಕಾಗಿತ್ತು. ನನ್ನೆರಡು ಮಕ್ಕಳನ್ನು ಹಡದಾಗ ನನ್ನ ಮಲಿಗೆ ಹಾಲು ಬಿದ್ದಿರಲಿಲ್ಲ. ನೀವೆಲ್ಲ ಪಾತವ್ವನ ಮಲಿ ಉಂಡ ದೊಡ್ಡಾರ ಆಗಿರಿ. ಮುಂದ ಅವರ ಲಗ್ನದಾಗೂ ಅವರ ಓಡಾಡಿ ಎಲ್ಲಕೆಲಸ ಮಾಡ್ಯಾರು. ಇಂಥವರು ನಮ್ಮೂರಿನನವರಲ್ಲ. ನಮ್ಮ ದೇಸದವರಲ್ಲ ಅಂದ್ರ ಹ್ಯೆಂಗಪಾ". (ಗೆಂಡೆ ದೇವ್ರು, ಅಲೈ ದೇವ್ರು, ಪುಟ: 34)

ಊರಿನಲ್ಲಿ ಹುಟ್ಟಿಕೊಂಡ ಹೊಸ ವರಸೆಗಳು ಕೊನೆಗೂ ಸಹಬಾಳ್ವೆಯನ್ನು ಸುಟ್ಟುಹಾಕುತ್ತವೆ. ಅಲೈ ದೇವರ ಹಬ್ಬದ ದಿನ ಕೊಂಡದ ಬಳಿ ಮೈಮೇಲೆ ದೇವರ ತುಂಬಿಸಿಕೊಂಡು ದೊಡ್ಡ ದೇವರಾಗಿ ಭಕ್ತರಿಗೆ 'ದೇವರಾ' (ಭಕ್ತರ ಹರಕೆ ಲೋಕದ ಕಷ್ಟಗಳಿಗೆ ಸಾಂತ್ವನ ಹೇಳುವುದು) ಹೇಳುತ್ತಿದ್ದ ಹುಸನಪ್ಪನನ್ನು ಕೋಮುವಾದಿ ಗುಂಪು ಉರಿಯುವ ಕೆಂಡಕ್ಕೆ ತಳ್ಳುತ್ತಾರೆ. ಹುಸನಪ್ಪ ತಾನು ಹೊತ್ತಿರುವ ಅಲೈ ದೇವರ ಸಮೇತ ಕೆಂಡದಲ್ಲಿ ಬಿದ್ದು, ಬೆಂದು ಚೀರಾಡಿ ಹೊರಬಂದಾಗ, ಮತ್ತೆ ಆ ಗುಂಪು ಅವನಿಗೆ ಹೊಡೆಯುತ್ತಾರೆ. ತೀವ್ರವಾಗಿ ಗಾಯಗೊಂಡ ಅವನು ಮನೆ ಸೇರುತ್ತಾನೆ. ಊರು ಎರಡು ಗುಂಪುಗಳಾಗಿ ಹಬ್ಬದ ಸಂಭ್ರಮ ನಾಶವಾಗಿ ಇನ್ನೂ ಎಲ್ಲೆಡೆ ಸ್ಮಶಾನ ಮೌನ ಆವರಿಸುತ್ತದೆ.

ಈ ನಡುವೆ ಲೋಕದ ಸಹಬಾಳ್ವೆಯಲ್ಲಿ ನಡೆದಿರುವ ಮುಸಲ್ಮಾನರ ವರ್ತನೆಗಳಿಗೂ ತಮಗೂ ಸಂಬಂಧವೇ ಇಲ್ಲ ಎಂದು ತಿಳಿದಿದ್ದ, ಹತ್ತಿರದ ಮಸೀದಿಯ ಜಮಾತ್ನವರು ಹುಸನಪ್ಪನ ಮನೆಗೆ ಬಂದು ತಾವು ರಕ್ಷಣೆ ಕೊಡುವುದಾಗಿಯೂ, ಅಲೈ ದೇವರು, ಮೊಹರಂ ಆಚರಣೆಯೊಡನೆ ಕೂಡಿಬಾಳುವ ಹಾದಿಯನ್ನು ಬಿಟ್ಟು ಇಸ್ಲಾಂ ಧರ್ಮದ ರೀತಿರಿವಾಜುಗಳನ್ನು ಕಲಿತು ಬದುಕುವಂತೆ ಒತ್ತಾಯಿಸುತ್ತಾರೆ. "ನೋಡಿ ಹುಸನಪ್ಪನವರೇ, ನೀವು ಹಳ್ಳಿಯವರು ನಮ್ಮ ಧರ್ಮದ ಬಗ್ಗೆ ತಿಳ್ಕೊಂಡು ಬದುಕಬೇಕು. ನಮ್ಮ ಧರ್ಮದಲ್ಲಿ ವಿಗ್ರಹಾರಧನೆ ಎಲ್ಲ ಮೂರ್ಖತನದ್ದು. ನಮಗೆ ಅಲ್ಲಾ ಒಬ್ಬನೇ ದೇವರು. ಅವನು ಸಹ ನಿರಾಕಾರಿ. ಆದ್ದರಿಂದ ಹೀಗೆ ಮೂರ್ಖರಂತೆ ಬಾಳಷ್ಟು ದೇವರುಗಳನ್ನು ಮೈಮೇಲೆ ಹೊತ್ಕೊಂಡು ಕುಣಿಯೋದೆಲ್ಲ ಮೂಢನಂಬಿಕೆ. ಅದನ್ನೆಲ್ಲ ಬಿಟ್ಟು ನೈಜ ಮುಸ್ಲಿಮರಾಗಿರಿ. ಆಗ ಮಾತ್ರ ನಾವು ನಿಮ್ಮ ಜೊತೆಗೆ ಇರ್ತೀವಿ ಎಂದು ಏನೇನೊ ಹೇಳಿದರು. ಹುಸನಪ್ಪ ಎಲ್ಲದಕ್ಕೂ ಗೋಣು ಹಾಕಿ ಅವರಿಗೆ ಕೈ ಮುಗಿದ. ಅವರು ಎದ್ದು ಹೋದರು." (ಗೆಂಡೆ ದೇವ್ರು, ಅಲೈ ದೇವ್ರು, ಪುಟ: 40) ಧಾರ್ಮಿಕ ಆವರಣಗಳು ಬಲಿಷ್ಟವಾಗುತ್ತಾ, ಧರ್ಮವನ್ನು ಬದುಕಿನಿಂದಲ್ಲಿ ದೂರಮಾಡಿ, ಧರ್ಮಗ್ರಂಥದಲ್ಲಿ ಜೋತುಬೀಳುವ ವರ್ತಮಾನದ ಮೂಲಭೂತವಾದಿ ಒತ್ತಾಯಗಳು ಹೇಗೆ ಒಂದು ಸಹಜವಾದ 'ಧಾರ್ಮಿಕ' ಸಹಬಾಳ್ವೆಯನ್ನು ಹಸನುಗೆಡಿಸಲಾರಂಭಿಸಿವೆ ಎಂಬುದು ಈ ಕಥನದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ.

ಅಲೈ ದೇವರ ಹಬ್ಬದ ಕೊನೆಯಲ್ಲಿ ಹಲವು ಸಂಸ್ಕಾರಗಳೊಡನೆ ದೇವರನ್ನು ಹೊಳೆಗೆ ಕಳಿಸುವ ಆಚರಣೆ ಇನ್ನೂ ಬಾಕಿ ಇದೆ. ಅಲೈ ದೇವರು ಬೆಂಕಿಯಲ್ಲಿ ಸುಟ್ಟು ಕರಕಲಾಗಿ ಮಸೀದಿ ಬಳಿ ಬಿದ್ದಿದೆ. ಜನರ ಸೌಹಾರ್ದದ ಮನಸ್ಸುಗಳೂ ಸುಟ್ಟಂತಾಗಿದ್ದು, ಯಾರೂ ಮುಂದೆ ಬರುತ್ತಿಲ್ಲ. ಎರಡೂ ಕೋಮಿನ ಜನರಲ್ಲಿ ಭಯ ಹುಟ್ಟಿದೆ. ಮೊದಲಾಗಿದ್ದರೆ ಮಧ್ಯಾಹ್ನ ಮೂರು ಗಂಟೆಯ ವೇಳೆಗೇ ಜನರೆಲ್ಲ ಹೊಸಬಟ್ಟೆ ತೊಟ್ಟು ಕೈಯಲ್ಲಿ ಉತ್ತತ್ತಿ ಹಿಡಿದು ಮಸೀದಿಯ ಬಳಿ ಸೇರಿ ಜಾತ್ರೆಯಾಗುತ್ತಿತ್ತು. ಯಾರೂ ಬರದಿದ್ದಾಗ ಮೋನಪ್ಪನೇ ಮುಸಲ್ಮಾನರ ಕೇರಿಗೆ ಹೋಗಿ ಎಲ್ಲರನ್ನು ಕರೆತರುತ್ತಾನೆ. ನಿಧಾನಕ್ಕೆ ಜನ ಎಂದಿನಂತೆ ಸೇರತೊಡಗುತ್ತಾರೆ. ಎಳೆಯ ಮಕ್ಕಳಂತೂ "ಅಜ್ಜ ಹೆಜ್ಜಿ ಆಡುದ್ರೊಳಗ ಬಾಳಾ ಖುಷಿ ಐತಿ. ಅದಕ್ಕ ಆಡ್ತೀವು" ಎನ್ನುತ್ತಾ ಮೋನಪ್ಪನ ಹಲಗೆಯ ಬಡಿತಕ್ಕೆ ಮತ್ತದೇ ಖುಷಿಯಿಂದ ಕುಣಿದು ಹೆಜ್ಜೆ ಹಾಕುತ್ತವೆ. ಹಿಂದೂ ಕೋಮುವಾದಿ ಗುಂಪು ಇದನ್ನೆಲ್ಲ ತಡೆಯಲು ಪ್ರಯತ್ನಿಸಿದರೂ ಸೌಹಾರ್ದದ ಆಚರಣೆಯ ಗುಂಪು ಗಟ್ಟಿಯಾಗಿ ನಿಂತು ಪ್ರತಿಭಟಿಸಿದಾಗ ಕೋಮುವಾದಿಗಳ ಪ್ರಯತ್ನ ತಣ್ಣಗಾಗುತ್ತದೆ. ಎಳೆಯ ಮಕ್ಕಳ ಖುಷಿಯಿಂದ ಬದುಕುವ ಆಸೆ, ಕೋಮುಶಕ್ತಿಗಳ ಎದುರು ಹೊರಹೊಮ್ಮುವ ಕೂಡಿಬಾಳಲು ಬಯಸುವವರ ಪ್ರತಿಭಟನೆ ಸದ್ಯದ ಮತೀಯ ಬೆಂಕಿಯ ನಡುವೆಯೂ ಆಚರಣೆಗಳ ಮುಂದುವರಿಕೆ ಸೌಹಾರ್ದದ ಹಾದಿಯನ್ನು ಉಳಿಸಿಕೊಳ್ಳಲೆತ್ನಿಸುತ್ತವೆ. ಹೀಗೆ ಈ ಕಥನ ಕೊನೆಗೂ ಸಾಮರಸ್ಯದ ಭರವಸೆಯೊಡನೆ ಕೊನೆಯಾಗುತ್ತದೆ.

ಇಂದು ದಮನಕಾರಿ ಆಧುನಿಕತೆ, ಶುಷ್ಕ ವೈಚಾರಿಕತೆ, ವ್ಯವಹಾರ ತಜ್ಞತೆ, ದೇವರುಗಳ ಬಗೆಗಿನ ಅಪಕಲ್ಪನೆ, ಧರ್ಮವನ್ನು ನಾಶಮಾಡಿರುವ ಧಾರ್ಮಿಕ ಮತೀಯವಾದ, ಉದರಪೋಷಣೆಯ ಗುರಿಮಾಡಿಕೊಂಡಿರುವ ಆಧುನಿಕ ಶಿಕ್ಷಣ, ಮನುಷ್ಯನ ಜೀವನಾನುಭವಗಳನ್ನು ವ್ಯಾಪಾರದ ಕಣ್ಣಿನಲ್ಲಿ ಕಾಣುವ ಜಾಗತೀಕರಣ, ಧರ್ಮ ಮತ್ತು ರಾಜಕೀಯದ ನಡುವಿನ ಅಪವಿತ್ರ ಮೈತ್ರಿ, ಚುನಾವಣಾ ರಾಜಕಾರಣ- ಹೀಗೆ ಹಲವು ಕಾರಣಗಳಿಗಾಗಿ ಕೂಡಿಬಾಳುವ ಜೀವನವಿಧಾನಗಳು ನಾಶವಾಗುತ್ತಿವೆ.

ಪರಾಮರ್ಶನ

1. ಅಮರೇಶ ನುಗಡೋಣಿ, ಸವಾರಿ, ಅಂಕಿತ ಪುಸ್ತಕ, ಬೆಂಗಳೂರು, 2007
2. ಗಣೇಶ್ ಮೊಗಳ್ಳಿ (ಸಂ), ಮತೀಯ ಭಯಾವತಾರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2009
3. ಕುಂ. ವೀರಭದ್ರಪ್ಪ, ಬರಿ ಕಥೆಯಲ್ಲೋ ಅಣ್ಣಾ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2014
4. ರಹಮತ್ ತರೀಕೆರೆ, ಧರ್ಮ ಪರೀಕ್ಷೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು, 2008
5. ರಹಮತ್ ತರೀಕೆರೆ, ಕರ್ನಾಟಕದ ಸೂಫಿಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2014
6. ರಹಮತ್ ತರೀಕೆರೆ, ಮರದೊಳಗಣ ಕಿಚ್ಚು, ಬೆಳ್ಳಿ ಚುಕ್ಕಿ ಬುಕ್ ಟ್ರಸ್ಟ್, ಬೆಂಗಳೂರು, 2002
7. ಹನುಮಂತ ಹಾಲಿಗೇರಿ, ಗೆಂಡೆದೇವ್ರು, ಕಾವ್ಯಮನೆ ಪ್ರಕಾಶನ, ಕಲಬುರ್ಗಿ, 2016.